ಓ.ಎಸ್.ನಂ.14/2011
ಡಿ.ಡಬ್ಲ್ಯೂ-01

<u>ಸಾಕ್ಷಿಯನ್ನು ದಿಃ **08.08.2024** ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರ ಶ್ರೀ.**K.N.**ವಕೀಲರಿಂದ.</u>

ವಾದಿಗಳು ಈ ದಾವೆಯನ್ನು ಬೋಗ್ಯ ಪತ್ರ ಮತ್ತು ಕ್ರಯ ಪತ್ರಗಳನ್ನು ಅವರ ತಂದೆ ಮಾಡಿಕೊಟ್ಟಿಲ್ಲ ಅವುಗಳು ಸುಳ್ಳು ದಾಖಲೆಗಳು ಆಗಿರುತ್ತವೆ ಅವುಗಳನ್ನು ರದ್ದು ಮಾಡುವಂತೆ ಮತ್ತು ಸದರಿ ದಾಖಲೆಗಳು ಅನುರ್ಜಿತ ದಾಖಲೆಗಳೆಂದು ಪರಿಹಾರ ಕೋರಿ ದಾಖಲು ಮಾಡಿರುತ್ತಾರೆ. ಸರ್ವೆ ನಂ 140/1 ಆಗಿದ್ದು 2 ಎಕರೆ 10 ಗುಂಟೆ ಜಮೀನು ಮೂಲತಃ ಬ್ಯಾಟಪ್ಪಅವರಿಗೆ ಸೇರಿದ್ದು ಇರುತ್ತದೆ. ಬ್ಯಾಟಪ್ಪ ಅವರಿಗೆ ಸದರಿ ಸ್ವತ್ತು ಅವರ ತಂದೆ ಗೌಡಯ್ಯ ಅವರಿಂದ ಬಂದಿರುತ್ತದೆ.

ಬ್ಯಾಟಪ್ಪ ಅವರು ಜೈಲರ ಆಗಿದ್ದರು. ತುಮಕೂರು ಮತ್ತು ಹಾಸನದಲ್ಲಿ ಕೆಲಸ ಮಾಡುತ್ತಿದ್ದು ಈ ವಿಚಾರವನ್ನು ನನ್ನ ಮಾವ ಹೇಳುತ್ತಿದ್ದರು. ಬ್ಯಾಟಪ್ಪ ಅವರು ಯಾವುದೇ ಬೋಗ್ಯ ಪತ್ರ ಮಾಡಿಕೊಟ್ಟಿರುವುದಿಲ್ಲ ವಾರದ ಆಧಾರದ ಮೇರೆಗೆ ನೀಡಿದ್ದರೂ ಎಂದರೆ ಸಾಕ್ಷಿ ಸುಮಾರು 50 ವರ್ಷಗಳಿಂದ ನನ್ನ ಮಾವ ಉಳುಮೆ ಮಾಡುತ್ತಿದ್ದು ಬೋಗ್ಯ ಪತ್ರ ಮಾಡಿಕೊಟ್ಟಿದ್ದರು ಎಂದು ಹೇಳುತ್ತಾರೆ. ದಿನಾಂಕ 15.05.1978 ರಲ್ಲಿ ಬೋಗ್ಯ ಪತ್ರ ಮಾಡಿ ಕೊಟ್ಟಿರುತ್ತಾರೆ. ಸದರಿ ಬೋಗ್ಯ ಪತ್ರದಲ್ಲಿ ಬೋಗ್ಯ ತಿರುವಳಿ ಆಗದಿದ್ದಲ್ಲಿ ರಂಗಯ್ಯ ಅವರಿಗೆ ಸೇರಬೇಕೆಂದು ಬರೆಯಲಾಗಿದೆಯೇ ಎಂದರೆ ಸಾಕ್ಷಿ ದಾಖಲೆಯಲ್ಲಿ ಬರೆದಿರುವುದಿಲ್ಲವೆಂದು ಹೇಳುತ್ತಾರೆ.

ಗಂಗಯ್ಯ ಅವರು ಯಾವ ದಿನಾಂಕ, ಯಾವ ವರ್ಷದಲ್ಲಿ ಮರಣ ಹೊಂದಿದ್ದಾರೆಂದರೆ ಸಾಕ್ಷಿ 21.04.2014 ರಲ್ಲಿ ಮರಣ ಹೊಂದಿದ್ದಾರೆಂದು ಹೇಳುತ್ತಾರೆ. ಗಂಗಯ್ಯ ಅವರ ಜೀವಿತ ಅವದಿಯಲ್ಲಿ ಬ್ಯಾಟಯ್ಯ ಅವರಿಗೆ ನೋಟಿಸ ನೀಡಿದ್ದರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಅವರು ಯಾರು ಬಂದು ಕೇಳಿರುವುದಿಲ್ಲ ಇವರು ನೋಟಿಸ್ ನೀಡಿದ್ದು ಗೊತ್ತಿಲ್ಲವೆಂದು ಹೇಳುತ್ತಾರೆ. ನನ್ನ ಗಂಡ ನೋಟಿಸ್ ನೀಡಿದ್ದಾರಾ ಇಲ್ಲವೂ ಎಂದರೆ ಇಲ್ಲವೆಂದು ಹೇಳುತ್ತಾರೆ. ನನ್ನ ಗಂಡ ಮರಣ ಹೊಂದಿದ ನಂತರ ನಾನು ಮತ್ತು ನನ್ನ ಮಕ್ಕಳು ಸಹ ನೋಟಿಸ್ ನೀಡಿರುವುದಿಲ್ಲ.

ನನ್ನ ಮಾವ ಗಂಗಯ್ಯ ಅವರು ದಾವಾ ಬಿ ಶೆಡ್ಯೂಲ್ ಅನ್ನು ಬೋಗ್ಯ ಆಧಾರದ ಮೇರೆಗೆ ಖಾತೆ ಮಾಡಿಕೊಂಡಿರುತ್ತಾರೆ. ನನ್ನ ಮಾವ ಮರಣ ಹೊಂದಿದ್ದು ಪಾವತಿವಾರಸ್ಸು ಮೇರೆಗೆ ನನ್ನ ಹೆಸರಿಗೆ ಖಾತೆ ಆಗಿರುತ್ತದೆ. ನಿ.ಪಿ 7 ದಾಖಲೆಯನ್ನು ನಾನು ನೋಡಿರುತ್ತೇನೆ. ನಿ.ಪಿ 7 ದಾಖಲೆ ಬಗ್ಗೆ ನಿ.ಡಿ 68 ರಲ್ಲಿ ಉಲ್ಲೇಖ ಇರುವುದಿಲ್ಲ. 1968 ರ ಬೋಗ್ಯ ಪತ್ರ ಏನಾಯಿತು ಎಂದರೆ ಸಾಕ್ಷಿ ಅದನ್ನು ಸಹ ಹಾಜರುಪಡಿಸಿರುತ್ತೇನೆ ಎಂದು ಹೇಳುತ್ತಾರೆ. 1968 ಮತ್ತು 1978 ರ ಬೋಗ್ಯ ಪತ್ರಗಳಲ್ಲಿ ಯಾವುದು ನಿಜವೆಂದರೆ ಸಾಕ್ಷಿ ಎರಡೂ ನಿಜ ಇರುತ್ತವೆ ಎಂದು ಹೇಳುತ್ತಾರೆ.

ಎರಡೂ ಬೋಗ್ಯ ಪತ್ರದ ಮೂಲ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿ ಅದು ನನ್ನ ಮಾವನ ಬಳಿ ಇದ್ದು ದೃಡಿಕೃತ ನಕಲನ್ನು ಹಾಜರುಪಡಿಸಿದ್ದೇನೆ ಎಂದು ಹೇಳುತ್ತಾರೆ. ನನ್ನ ಮಾವ ಬ್ಯಾಟಪ್ಪ ಅವರು ಊರಿನಲ್ಲಿ ಇಲ್ಲದಿದ್ದರು ದುರುಪಯೋಗ ಪಡೆದುಕೊಂಡು ಖಾತಾ ನಂ 115/1979 ಮತ್ತು 242/60 ಗಳನ್ನು ಸೃಷ್ಟಿ ಮಾಡಿರುತ್ತಾರೆ ಎಂದೆ ಸರಿಯಲ್ಲ. ಬೋಗ್ಯ ಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿದವರನ್ನು ವಿಚಾರಣೆ ಮಾಡುತ್ತಿರಾ ಎಂದರೆ ಸಾಕ್ಷಿ ಅವರಿಬ್ಬರೂ ಮರಣ ಹೊಂದಿದ್ದಾರೆಂದು ಹೇಳುತ್ತಾರೆ. ಆ ರೀತಿ ಯಾವುದೇ ಸಾಕ್ಷಿಗಳು ಇರಲಿಲ್ಲ ಆದ ಕಾರಣ ಅವರನ್ನು ಕರೆದುಕೊಂಡು ಬರಲು ಆಗುವುದಿಲ್ಲವೆಂದು ಹಾಗಾಗಿ ಅವರು ಮರಣ ಹೊಂದಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಬೋಗ್ಯ ಪತ್ರ ಆಗುವ ಕಾಲಕ್ಕೆ ನಾನು ಆ ಮನೆಯ ಸೊಸೆ ಆಗಿರಲಿಲ್ಲಿ. ಸರ್ವೆ ನಂ 140/1 ಕ್ಕೆ ಸಂಬಂಧಿಸಿದಂತೆ ನಿಮ್ಮ ಖಾತಾ ಮಾಡಿಕೊಳ್ಳಲು ನೊಂದಾಯಿತ ದಾಖಲೆ ಇದೆಯೇ ಎಂದರೆ ಸಾಕ್ಷಿ ಇದೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ಹೇಳುತ್ತಾರೆ. ಸರ್ವೆ ನಂ 140/1 ರಲ್ಲಿ ನಾನು ಕಾನೂನುಬಾಹಿರವಾಗಿ ಸ್ವಾಧೀನದಲ್ಲಿ ಇದ್ದೇನೆ ಎಂದರೆ ಸರಿಯಲ್ಲ. ವಾದಿಗಳಿಗೆ ಸ್ವಾಧೀನವನ್ನು ಬಿಟ್ಟುಕೊಡಬೇಕೆಂದು ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. 1968 ಮತ್ತು 1978 ರ ಬೋಗ್ಯ ಪತ್ರಗಳನ್ನು ನಾವು ಸೃಷ್ಟಿ ಮಾಡಿರುವ ಕಾರಣ ವಾದಿಗಳ ಮೇಲೆ ಬಂದನಕಾರಿ ಆಗುವುದಿಲ್ಲವೆಂದರೆ ಸರಿಯಲ್ಲ.

ಬ್ಯಾಟಪ್ಪ ಅವರು ಬೋಗ್ಯ ಪತ್ರ ಮಾಡಿಕೊಡುವ ಸಮಯದಲ್ಲಿ ಖಾತೆ ಇತ್ತಾ ಎಂದರೆ ಸಾಕ್ಷಿ ಖಾತೆ ಆಗಿತ್ತು ಎಂದು ನನ್ನ ಮಾವ ಹೇಳುತ್ತಿದ್ದರು ಎಂದು ಹೇಳುತ್ತಾರೆ.ಬ್ಯಾಟಪ್ಪ ಅವರು ಬೋಗ್ಯ ಪತ್ರ ಮಾಡಿಕೊಡುವ ಸಮಯದಲ್ಲಿ ಅವರ ಹೆಸರಿಗೆ ಖಾತೆ ಇರಲಿಲ್ಲ ಅವರ ತಂದೆ ಗೌಡಯ್ಯ ಅವರ ಹೆಸರಿಗೆ ಇತ್ತು ಎಂದರೆ ಸಾಕ್ಷಿ ನನ್ನ ಮಾವ ಖಾತೆ ಇದ್ದ ಬಗ್ಗೆ ಹೇಳುತ್ತಿದ್ದು ನನಗೆ ಗೊತ್ತಿಲ್ಲವೆಂದು ಹೇಳುತ್ತಾರೆ.

ಬ್ಯಾಟಪ್ಪ ಅವರನ್ನು ನಾನು ನೋಡಿರುವುದಿಲ್ಲ. ನಿ.ಡಿ 1 ದಾಖಲೆಗೆ ಬ್ಯಾಟಪ್ಪ ಅವರು ಸಹಿ ಇರುತ್ತದೆ. ಸದರಿ ದಾಖಲೆಯ ಮೇಲೆ ಬೆಟಪ್ಪ ಎಂದು ಸಹಿ ಇದ್ದು ಬ್ಯಾಟಪ್ಪ ಅವರ ಸಹಿ ಇರುವುದಿಲ್ಲವೆಂದರೆ ಸರಿಯಲ್ಲ. ಬ್ಯಾಟಪ್ಪ ಅವರ ಜೀವಿತ ಅವಧಿಯಲ್ಲಿ ಸುಮಾರು 200 ತೆಂಗಿನ ಮರಗಳನ್ನು ದಾವಾ ಬಿ ಶೆಡ್ಯೂಲ್ ಸ್ವತ್ತಿನಲ್ಲಿ ನೆಟ್ಟಿದ್ದು ಈಗ 80 ರಿಂದ 90 ಮರಗಳು ಉಳಿದಿರುತ್ತವೆ ಎಂದರೆ ಸಾಕ್ಷಿ ನನ್ನ ಮಾವ ಮತ್ತು ನನ್ನ ಗಂಡ ನೆಟ್ಟಿದ್ದಾರೆಂದು ಹೇಳುತ್ತಾರೆ.

ಬ್ಯಾಟಪ್ಪ ಅವರು ಅವರ ಜೀವಿತ ಅವಧಿಯಲ್ಲಿ ಯಾವುದೇ ನೊಂದಾಯಿತ ದಾಖಲೆ ಮಾಡಿಕೊಟ್ಟಿಲ್ಲ ಮತ್ತು ನೊಂದಾಯಿತ ದಾಖಲೆ ಮಾಡಿಕೊಡುವ ಅಧಿಕಾರ ಇರಲಿಲ್ಲವೆಂದರೆ ಸರಿಯಲ್ಲ. ದಾವಾ ಬಿ ಸ್ವತ್ತು ಪಿತ್ರಾರ್ಜಿತ ಸ್ವತ್ತಾಗಿದ್ದರಿಂದ ಬ್ಯಾಟಪ್ಪ ಅವರಿಗೆ ದಾಖಲೆ ಬರೆದುಕೊಡುವ ಅಧಿಕಾರಿ ಇರಲಿಲ್ಲವೆಂದರೆ ಸರಿಯಲ್ಲ. ನಿ.ಡಿ 37 ರಿಂದ 65 ದಾಖಲೆಗಳನ್ನು ದಾವಾ ಸ್ವತ್ತು ಖಬಳಿಸುವ ಉದ್ದೇಶದಿಂದ ಸೃಷ್ಟಿ ಮಾಡಿರುತ್ತೆನೆ ಎಂದರೆ ಸರಿಯಲ್ಲ. ಬ್ಯಾಟಪ್ಪ ಅವರನ್ನು ಹೊರತು ಪಡಿಸಿ ಅವರ ಹೆಂಡತಿ ಮಕ್ಕಳು ಸದರಿ ದಾಖಲೆಗ ಸಹಿ ಮಾಡಿರುವುದಿಲ್ಲ ಹಾಗಾಗಿ ಅವರಿಗೂ ಸಹ ಹಕ್ಕು ಮತ್ತು ಅಧಿಕಾರಿ ಇರುತ್ತದೆ ಎಂದರೆ ಸರಿಯಲ್ಲ.

ವಕೀಲರ ಮೂಲಕ ನೋಟಿಸ್ ಬಂದ ನಂತರ ನಾನು ಖಾತೆಯನ್ನು ನನ್ನ ಹೆಸರಿಗೆ ಬದಲಾವಣೆ ಮಾಡಿಕೊಂಡಿದ್ದೇನೆ ಎಂದರೆ ಸಾಕ್ಷಿ ಅದಕ್ಕೂ ಮೊದಲೆ ಮಾಡಿಕೊಂಡಿದ್ದೆ ಎಂದು ಹೇಳುತ್ತಾರೆ. ಈ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ನಿ.ಡಿ 65 ದಾಖಲೆಯನ್ನು 15.09.2010 ರಲ್ಲಿ ಆಗಿರುತ್ತದೆ. 2011 ರಲ್ಲಿ ವಾದಿ ಅವರ ವಕೀಲರ ಮುಖಾಂತರ ನೋಟಸ್ ಕಳುಹಿಸಿರುತ್ತಾರೆ. ವಾದಿಗಳು ನಮ್ಮ ಬಳಿ ಬಂದು ದಾವಾ ಸ್ವತ್ತಿನ ಸ್ವಾಧೀನವನ್ನು ಬಿಟ್ಟುಕೊಡುವಂತೆ ಕೇಳಿದಾಗ ನಾನು ಖಾತೆಯನ್ನು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮ್ಯೂಟೇಷನ್ ಅನ್ನು ಪ್ರಶ್ನೆ ಮಾಡಿ ವಾದಿ ಎಸಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೆ ಎಂದರೆ ಸರಿ . ಸದರಿ ಮೇಲ್ಮನವಿ ಚಾಲ್ತಿಯಲ್ಲಿದೆ ಎಂದರೆ ಸರಿ. ಈ ದಾವೆ ಗೋಸ್ಕರ ಪಟ್ಟಾ-ಬುಕ್ ಮತ್ತು ಕಂದಾಯ ರಶೀದಿ ಮತ್ತು ಎಂ.ಆರ್ ಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ

ಕುಣಿಗಲ್.